# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 20-05-2022 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು**

1. ಶ್ರೀ ನಾಗಪ್ಪ ಕಮತಿ (ನೋಡಲ್ ಅಧಿಕಾರಿ)
2. ಶ್ರೀ ಎಸ್. ರಾಜನ್ (ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು)
3. ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
4. ಶ್ರೀ ಎಸ್.ಎ ರೆಹಮಾನ್, ವಾಟರ್ ಇನ್ಸ್‌ಪೆಕ್ಟರ್, ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ಇಲಾಖೆ,
5. ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು,
6. ಶ್ರೀ ಶ್ರೀನಿವಾಸ್, ಕಂದಾಯ ನಿರೀಕ್ಷಕರು,
7. ಶ್ರೀ ಜೋಶ್ವಾ, ಕರ ವಸೂಲಿಗಾರರು,
8. ಶ್ರೀ ಹೆಚ್.ಆರ್ ನಾಯಕ್, ಸಂಚಾರ ಪೊಲೀಸ್, ಬಾಣಸವಾಡಿ,
9. ಶ್ರೀ ಗಿರೀಶ್ ಯಾದವ್, ಸ್ಥಳೀಯರು,
10. ಶ್ರೀ ಮುರುಳಿ, ಸ್ಥಳೀಯರು,
11. ಶ್ರೀ ಕೆಂಪರಾಜ್, ಸ್ಥಳೀಯರು,
12. ಶ್ರೀ ರಾಬಿನ್ ಗೌಡ, ಸ್ಥಳೀಯರು,
13. ಶ್ರೀ ಕೆ.ಸಿ ಮಂಜುನಾಥ, ಸ್ಥಳೀಯರು,
14. ಶ್ರೀ ಮೋಹನ್ ಕುಮಾರ್, ಸ್ಥಳೀಯರು,
15. ಶ್ರೀ ಗೋಪಾಲ ರೆಡ್ಡಿ, ಸ್ಥಳೀಯರು,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ಕೆಂಪರಾಜ್ ರವರು ಮಾತನಾಡಿ:-**

- ಕಮ್ಮನಹಳ್ಳಿ ವಾರ್ಡ್ ವ್ಯಾಪ್ತಿಯ ಸದಾಶಿವ ದೇವಸ್ಥಾನ ರಸ್ತೆ, 8ನೇ ಮತ್ತು 10ನೇ ಅಡ್ಡರಸ್ತೆಯು ತುಂಬಾ ಹಾಳಾಗಿದ್ದು, ಸ್ಥಳೀಯ ಸಾರ್ವನಿಕರಿಗೆ ತೊಂದರೆಯಾಗಿದ್ದು, ಕೂಡಲೇ ಕಾಂಕ್ರೀಟ್ ರಸ್ತೆಯನ್ನು ನಿರ್ಮಾಣ ಮಾಡಲು ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ವಾರ್ಡ್ ವ್ಯಾಪ್ತಿಯ ಮಾರುತಿ ಗ್ರೌಂಡ್, ಶಾಲಾ ಆವರಣದಲ್ಲಿ ಸದರಿ ಶಾಲೆಯ ಸುತ್ತಮುತ್ತಲಿನ ನಾಗರೀಕರು ಕಸವನ್ನು ಎಸೆದು ಶಾಲಾ ಆವರಣವನ್ನು ಹಾಳು ಮಾಡುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಗಮನ ಹರಿಸಿ,. ಶಾಲಾ ಆವರಣ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ವಾರ್ಡ್ ವ್ಯಾಪ್ತಿಯ ಜೆ.ವಿ.ಶೆಟ್ಟಿ ರಸ್ತೆಯಲ್ಲಿ ಎಲ್ಲಂದರಲ್ಲಿ ಕಸ ಕಡ್ಡಿ ಎಸೆದು ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಇದನ್ನು ಕೂಡಲೇ ಸದರಿ ಸ್ಥಳದಿಂದ ತೆರವುಗೊಳಿಸಲು ಸಭೆಗೆ ತಿಳಿಸಿದರು.

2) **ಶ್ರೀ ರಾಬಿನ್ ಗೌಡ ರವರು ಮಾತನಾಡಿ :-**

- ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಬೆಳಗಿನ ಜಾವ ಸುಮಾರು 4.00 ಗಂಟೆಗೆ ಅನಾಮಧೇಯ ವ್ಯಕ್ತಿಗಳು ಕೇಬಲ್ ಅಳವಡಿಸಲು ರಸ್ತೆಯನ್ನು ಅಗೆಯುತ್ತಿದ್ದು, ಸದರಿ ರಸ್ತೆಯಲ್ಲಿ ರಸ್ತೆಯನ್ನು ಅಗೆದು ಸಾರ್ವಜನಿಕ ಸಂಚಾರಕ್ಕೆ ತೊಂದರೆಯನ್ನುಂಟು ಮಾಡಿರುವ ಸಂಸ್ಥೆಯ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಅನುಮತಿಯನ್ನು ಪಡೆಯದೇ ರಸ್ತೆಗಳನ್ನು ಕತ್ತರಿಸಿ, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯನ್ನು ಉಂಟು ಮಾಡುತ್ತಿರುವ ಕಂಪನಿಯವರ ವಿರುದ್ಧ ಮೇಲಾಧಿಕಾರಿಗಳಿಗೆ ತಿಳಿಸಿ, ಸೂಕ್ತ ಕ್ರಮ ವಹಿಸಲು ಸಭೆಗೆ ತಿಳಿಸಿದರು.

3) **ಶ್ರೀ ಗಿರೀಶ್ ಯಾದವ್ ರವರು ಮಾತನಾಡಿ:-**

- ಕಮ್ಮನಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಸಂಚಾರಿ ಪೋಲೀಸರು ಮಫ್ತಿಯಲ್ಲಿ ಬಂದು ಹೆಲ್ಮೆಟ್ ಧರಿಸದೇ ಇರುವ ವಾಹನಗಳನ್ನು ಫೋಟೋ ತೆಗೆದುಕೊಳ್ಳುತ್ತಿದ್ದು, ಇದರಿಂದ ವಾರ್ಡ್ ವ್ಯಾಪ್ತಿಯ ಅಡ್ಡರಸ್ತೆ ಹಾಗೂ ಕೆಲವು ಚಿಕ್ಕ ಚಿಕ್ಕ ರಸ್ತೆಗಳಲ್ಲಿ ಸಂಚರಿಸುವುದೂ ಸಹ ಕಷ್ಟಸಾಧ್ಯವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಅನೇಕ ರಸ್ತೆಗಳಲ್ಲಿ ಹೂಳು ಯತೇಚ್ಛವಾಗಿ ಬಿದ್ದಿದ್ದು ಇದನ್ನು ಆಗಿಂದ್ದಾಗ್ಗೆ ತೆರವುಗೊಳಿಸಬೇಕಾಗಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಿಲ್ಟ್ ಅಂಡ್ ಟ್ರಾಕ್ಟರ್ ಕಾಮಗಾರಿಗೆ ಈಗಾಗಲೇ 3-4 ಬಾರಿ ಟೆಂಡರ್ ಕರೆಯಲಾಗಿದ್ದು, ಯಾವುದೇ ಗುತ್ತಿಗೆದಾರರು ಬಿಡ್ ಸಲ್ಲಿಸದೇ ಇರುವುದರಿಂದ ಸದರಿ ಕಾಮಗಾರಿಯನ್ನು ನಿರ್ವಹಿಸಲು ಕಷ್ಟಸಾಧ್ಯವಾಗಿರುವುದಾಗಿ ಹಾಗೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಸಿಲ್ಟ್ ಅಂಡ್ ಟ್ರಾಕ್ಟರ್ ಕಾಮಗಾರಿಯನ್ನು ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಹೊಸದಾಗಿ ಡಾಂಬರೀಕರಣ ಮಾಡಲು ಸಾಮಗ್ರಿಗಳನ್ನು ಹಾಕಲಾಗಿದ್ದು, ರಸ್ತೆ ನಿರ್ಮಾಣದ ಉಸ್ತುವಾರಿ ನೋಡಿಕೊಳ್ಳುತ್ತಿರುವವರ ಮಾಹಿತಿ ನೀಡಲು ಹಾಗೂ ಈ ರಸ್ತೆ ನಿರ್ಮಾಣದ ಗುಣಮಟ್ಟವನ್ನು ಹಾಳಾಗದಂತೆ ನೋಡಿಕೊಳ್ಳಲು ಸಭೆಗೆ ತಿಳಿಸಿದರು,
- ವಾರ್ಡ್ ವ್ಯಾಪ್ತಿಯಲ್ಲಿ ಹಾಲೀ ಚಾಲ್ತಿಯಲ್ಲಿರುವ ಕಾಮಗಾರಿಗಳ ಮಾಹಿತಿಯನ್ನು ನೀಡಲು ಸಭೆಗೆ ತಿಳಿಸಿದರು.
- ಪ್ರಸ್ತುತ ಮಳೆ ಪ್ರಾರಂಭವಾಗಿದ್ದು, ವಾರ್ಡ್ ವ್ಯಾಪ್ತಿಯ ಚರಂಡಿಗಳಲ್ಲಿ ಹೂಳು ತುಂಬಿದ್ದು, ಇದರಿಂದ ಮಳೆಗಾಲದಲ್ಲಿ ಮಳೆಯ ನೀರು ಚರಂಡಿಯಲ್ಲಿ ಸರಾಗವಾಗಿ ಹರಿಯದೇ ರಸ್ತೆಗಳಲ್ಲಿ ಹರಿಯುತ್ತಿರುವುದು ಕಂಡು ಬಂದಿದ್ದು, ಇದರಿಂದ ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದ್ದು, ಚರಂಡಿಯಲ್ಲಿನ ಹೂಳನ್ನು ಅತೀ ತುರ್ತಾಗಿ ತೆರವುಗೊಳಿಸಿ, ಮಳೆಯ ನೀರು ಚರಂಡಿಯಲ್ಲಿ ಸರಾಗವಾಗಿ ಹರಿಯಲು ಅನುವು ಮಾಡಿಕೊಡಲು ಸಭೆಗೆ ತಿಳಿಸಿದರು.

4) **ಶ್ರೀ ಗೋಪಾಲ್ ರವರು ಮಾತನಾಡಿ:-**

- ವಾರ್ಡ್ ವ್ಯಾಪ್ತಿಯ ಐ.ಓ.ಸಿ ಫ್ಲೈ ಓವರ್ ಕೆಳಗಿನ ಭಾಗದಲ್ಲಿ ಕಟ್ಟಡದ ಕಟ್ಟಡದ ತ್ಯಾಜ್ಯವನ್ನು ಹಾಕಿದ್ದು, ಮಾಲೀಕರಿಗೆ ನೋಟೀಸ್ ಜಾರಿಗೊಳಿಸಲು ಸಭೆಗೆ ತಿಳಿಸಿದರು.

5) **ಶ್ರೀ ಮುರುಘ ದಾಸ್ ರವರು ಮಾತನಾಡಿ:-**

- ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಕಳ್ಳತನ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಅಂತಹ ಸ್ಥಳಗಳನ್ನು ಗುರುತಿಸಿ, ಸೂಕ್ತ ರೀತಿಯಲ್ಲಿ ಸಿ.ಸಿ ಕ್ಯಾಮೆರಾಗಳನ್ನು ಅಳವಡಿಸಿದಲ್ಲಿ ಅಂತಹ ಕೃತ್ಯಗಳನ್ನು ತಡೆಗಟ್ಟಲು ಅನುಕೂಲವಾಗುವುದಾಗಿ ಸಭೆಗೆ ತಿಳಿಸಿದರು.
- ವಾರ್ಡ್ ಪ್ರದೇಶದಲ್ಲಿ ಕೆಲಸ ಬಡಾವಣೆಗಳಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯದೇ ಇರುವುದರಿಂದಲೂ ಸಹ ಅಂತಹ ಸ್ಥಳಗಳಲ್ಲಿ ಕಳ್ಳತನಗಳು ಹೆಚ್ಚಾಗುತ್ತಿದ್ದು, ಅಂತಹ ಎಲ್ಲಾ ರಸ್ತೆಗಳಲ್ಲಿ ಸುಸಜ್ಜಿತ ಎಲ್.ಇ.ಡಿ ಲೈಟ್‌ಗಳನ್ನು ಅಳವಡಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಕೃಷ್ಣಪ್ಪ ರಸ್ತೆಯಲ್ಲಿ ಇತ್ತೀಚೆಗೆ ಬಿದ್ದ ಭಾರೀ ಮಳೆಗೆ ಮರವು ರಸ್ತೆ ಪಕ್ಕದ ಕಟ್ಟಡದ ಮೇಲೆ ಬಿದ್ದಿದ್ದು, ಅದನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು.

6) **ಶ್ರೀ ರವಿಚಂದ್ರನ್ ರವರು ಮಾತನಾಡಿ:-**

- ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸಂಚಾರಿ ಪೊಲೀಸರು ಮಫ್ತಿಯಲ್ಲಿ ಬಂದು ಹೆಲ್ಮೆಟ್ ಧರಿಸದೇ ಇರುವ ವಾಹನಗಳನ್ನು ಫೋಟೋ ತೆಗೆದುಕೊಳ್ಳುತ್ತಿದ್ದು, ಇದನ್ನು ತಡೆಗಟ್ಟಲು ಸಂಬಂಧಪಟ್ಟ ಸಂಚಾರಿ ಪೊಲೀಸ್ ಠಾಣೆ ರವರ ಗಮನಕ್ಕೆ ತಂದು, ಮುಖ್ಯರಸ್ತೆಗಳನ್ನು ಹೊರತುಪಡಿಸಿ, ಅಡ್ಡರಸ್ತೆ ಹಾಗೂ ಇತರೆ ಗಲ್ಲಿ ರಸ್ತೆಗಳಲ್ಲಿ ಫೋಟೋ ತೆಗೆಯದಂತೆ ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಪಾಲಿಕೆ ವತಿಯಿಂದ ಬೋರ್‌ಬೆಲ್‌ಗಳನ್ನು ಕೊರೆಯಲಾಗಿದ್ದು, ಈ ಪೈಕಿ ಕೇವಲ 30 ಬೋರ್‌ವೆಲ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ ಬೋರ್‌ವೆಲ್‌ಗಳನ್ನು ಬಿಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ದುರಸ್ತಿ ಮಾಡಿಸಿದಲ್ಲಿ ಮುಂಬರುವ ಬೇಸಿಗೆ ಕಾಲಕ್ಕೆ ಅನುಕೂಲವಾಗುವುದಾಗಿ ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಬೋರ್‌ವೆಲ್‌ಗಳಿಗೆ ಪ್ರತಿ ಮಾಹೆಯಲ್ಲಿ ಬಿಡಬ್ಲ್ಯೂ.ಎಸ್.ಎಸ್.ಬಿ ರವರು ಶುಲ್ಕವನ್ನು ವಿಧಿಸುತ್ತಿದ್ದು, ಅವುಗಳ ನಿರ್ವಹಣೆ ಮಾತ್ರ ಮಾಡದೇ ಬರೀ ಬಿಲ್ಲುಗಳನ್ನು ಸಲ್ಲಿಸುತ್ತಿರುವುದು ಕಂಡು ಬಂದಿದ್ದು, ದುರಸ್ತಿಯಲ್ಲಿರುವ ಎಲ್ಲಾ ಬೋರ್‌ವೆಲ್‌ಗಳನ್ನು ಕೂಡಲೇ ದುರಸ್ತಿಪಡಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಹೌಸಿಂಗ್ ಬೋರ್ಡ್‌ನಲ್ಲಿರುವ ಚರಂಡಿಗಳಲ್ಲಿ ಹೂಳು ತುಂಬಿದ್ದು, ನೀರು ಚರಂಡಿಯಿಂದ ಮೇಲೆ ಬಂದು ಹೌಸಿಂಗ್ ಬೋರ್ಡ್‌ನಲ್ಲಿರುವ ಮನೆಗಳಿಗೆ ನುಗ್ಗುತ್ತಿರುವುದು ಕಂಡು ಬಂದಿದ್ದು, ಇದನ್ನು ಕೂಡಲೇ ಈ ಪ್ರದೇಶದಲ್ಲಿರುವ ಎಲ್ಲಾ ಚರಂಡಿಗಳಲ್ಲಿರುವ ಹೂಳನ್ನು ತೆಗೆದು ನೀರು ಚರಂಡಿಯಲ್ಲಿ ಹರಿಯಲು ಅನುವು ಮಾಡಿಕೊಡಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಸೀತಮ್ಮ ರಸ್ತೆಯ ಚರಂಡಿಗಳಲ್ಲಿ ಹೂಳು ತುಂಬಿದ್ದು, ನೀರು ಚರಂಡಿಯಿಂದ ಮೇಲೆ ಬಂದು ರಸ್ತೆಗಳಲ್ಲಿ ಹರಿಯುತ್ತಿದ್ದು, ಚರಂಡಿಗಳಲ್ಲಿರುವ ಹೂಳನ್ನು ತೆಗೆಯಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

7) <u>ಶ್ರೀ ಮಂಜುನಾಥ ರವರು ಮಾತನಾಡಿ:-</u>

- ವಾರ್ಡ್ ವ್ಯಾಪ್ತಿಯ ಅರಳಿಮರ ರಸ್ತೆಯ ಚರಂಡಿಗಳಲ್ಲಿ ಹೂಳು ತುಂಬಿದ್ದು, ನೀರು ಚರಂಡಿಯಿಂದ ಮೇಲೆ ಬಂದು ರಸ್ತೆಗಳಲ್ಲಿ ಹರಿಯುತ್ತಿದ್ದು, ಚರಂಡಿಗಳಲ್ಲಿರುವ ಹೂಳನ್ನು ತೆಗೆಯಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದೇ ಇರುವುದರಿಂದ ಸಾರ್ವಜನಿಕರು ಸಣ್ಣ ಪುಟ್ಟ ಕಾಯಿಲೆಗಳಿಗೆ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸುವುದು ಅನಿವಾರ್ಯವಾಗಿರುತ್ತದೆ. ಆದುದರಿಂದ ವಾರ್ಡ್ ವ್ಯಾಪ್ತಿಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಿದಲ್ಲಿ, ಮಧ್ಯಮ ವರ್ಗ ಹಾಗೂ ಕೂಲಿ ಕಾರ್ಮಿಕ ವರ್ಗದ ಜನರಿಗೆ ಇದರಿಂದ ತುಂಬಾ ಅನುಕೂಲವಾಗುತ್ತದೆ. ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಅತೀ ಶೀಘ್ರವಾಗಿ ವಾರ್ಡಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಅರಳಿ ಮರ ರಸ್ತೆಯ ಬಲ ಬದಿಯಲ್ಲಿ ವಾರ್ಡ್ ಸಂಖ್ಯೆ.27, ಬಾಣಸವಾಡಿ ವ್ಯಾಪ್ತಿಗೆ ಬರುತ್ತಿದ್ದು, ಈ ರಸ್ತೆಯ ತುಂಬಾ ಕಸ ಕಡ್ಡಿ ಹಾಗೂ ಇತರೆ ತ್ಯಾಜ್ಯವನ್ನು ಸುರಿದಿದ್ದು, ಇದನ್ನು ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಕೂಡಲೇ ಸ್ವಚ್ಛಗೊಳಿಸಲು ಸಭೆಗೆ ತಿಳಿಸಿದರು.

8) <u>ಶ್ರೀ ವಿಜಯೇಂದ್ರ ಶೆಟ್ಟಿ ರವರು ಮಾತನಾಡಿ:-</u>

- ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೇ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳನ್ನು ನಿರ್ವಹಣೆ ಮಾಡುವವರ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡಿದಲ್ಲಿ, ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಂದರ್ಭದಲ್ಲಿ ಕಳ್ಳತನ ಹಾಗೂ ಇತರೆ ಕೃತ್ಯಗಳು ನಡೆದಲ್ಲಿ ಸಿಸಿಟಿವಿ ಫುಟೇಜ್ ಅನ್ನು ವೀಕ್ಷಿಸಲು ಹಾಗೂ ಕಳ್ಳರನ್ನು ಪತ್ತೆಹಚ್ಚಲು ಅನುಕೂಲವಾಗುವುದಾಗಿ ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿರುವ ಅಳವಡಿಸಿರುವ ಅನುಪಯುಕ್ತ ಕೇಬಲ್‌ಗಳಿಂದ ವಾಹನಗಳಿಗೆ ತಗುಲಿ ಅಪಘಾತಗಳು ಆಗುವ ಸಾಧ್ಯತೆ ಇದ್ದು, ವಾರ್ಡ್ ವ್ಯಾಪ್ತಿಯಲ್ಲಿರುವ ಅಂತಹ ಅನುಪಯುಕ್ತ ಕೇಬಲ್‌ಗಳನ್ನು ತೆರವುಗೊಳಿಸಿ, ಸಾರ್ವಜನಿಕ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ರಾತ್ರಿ ಸಮಯದಲ್ಲಿ ನೀರು ಬಿಡುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದ್ದು, ನೀರು ಬಿಡುವ ಸಮಯವನ್ನು ಸಾರ್ವಜನಿಕರ ಗಮನಕ್ಕೆ ತಂದು ನೀರು ಸರಬರಾಜು ಮಾಡಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಗಮನಕ್ಕೆ ತರಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಿರ್ಮಾಣ ಮಾಡಿರುವ ಎಲ್ಲಾ ವಸತಿ ಮನೆಗಳಿಗೆ ವಾಣಿಜ್ಯ ವಿದ್ಯುತ್ ಬಿಲ್ಲುಗಳನ್ನು ನೀಡುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಅಧಿಕ ಹೊರೆ ಬೀಳುತ್ತಿದ್ದು, ಈ ಬಗ್ಗೆ ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ ರವರಿಂದ ಮಾಹಿತಿ ಪಡೆಯಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರು ವಾರ್ಡ್ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಮರದ ಎಲೆಗಳನ್ನು ಸಂಗ್ರಹಿಸಿ, ಎಲ್ಲಂದರಲ್ಲಿ

ಬೆಂಕಿ ಹಚ್ಚುತ್ತಿರುವುದು ಕಂಡುಬಂದಿದ್ದು, ಇದನ್ನು ತಡೆಗಟ್ಟಲು ಹಾಗೂ ಈ ಬಗ್ಗೆ ಕ್ರಮ ವಹಿಸಲು ಸಭೆಗೆ ತಿಳಿಸಿದರು.

9) **ಶ್ರೀ ಜಿ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು, ರವರು ಮಾತನಾಡಿ:-**

- ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕಿಗೆ ಒಳಪಟ್ಟ ಸುಮಾರು 88 ಜನ ಸಾವಿಗೀಡಾಗಿದ್ದು, ಈ ಪೈಕಿ 85 ಜನ ಮೃತರ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ಬರುವ ರೂ.1.00 ಲಕ್ಷ (ರೂ.ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ನೀಡಲಾಗಿದ್ದು, ಈ ಪೈಕಿ ಬಾಕಿ ಕೇವಲ 03 ಜನರಿಗೆ ಮಾತ್ರ ಪರಿಹಾರ ಧನ ವಿನಯೋಗವಾಬೇಕಾಗಿದ್ದು, ಈ ಬಗ್ಗೆ ಅತೀ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದು ತಿಳಿಸುತ್ತಾ, ಈ ಕಾರ್ಯವು ಅತೀ ಶ್ಲಾಘನೀಯ ಸಂಗತಿ, ಈ ಬಗ್ಗೆ ಕ್ರಮ ವಹಿಸಿರುವ ಎಲ್ಲಾ ಅಧಿಕಾರಿಗಳಿಗೆ ತುಂಬು ಹೃದಯದ ಧನ್ಯವಾದಗಳನ್ನು ಸಭೆಯ ಪರವಾಗಿ ಸಲ್ಲಿಸಲಾಯಿತು.

ನೋಡೆಲ್ ಅಧಿಕಾರಿ ರವರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಳ್ಳಲು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಉಲ್ಬಣವಾಗುವ ಎಲ್ಲಾ ಸಮಸ್ಯೆಗಳ ತ್ವರಿತ ನಿರ್ವಹಣೆಗಾಗಿ ಹೊಸದಾಗಿ ಒಂದು ವಾಟ್ಸ್ ಆಪ್ ಗ್ರೂಪ್ ಕ್ರಿಯೇಟ್ ಮಾಡಿ, ಈ ಗ್ರೂಪ್‌ನಲ್ಲಿ ವಾರ್ಡ್ ಮಟ್ಟದಲ್ಲಿರುವ ಎಲ್ಲಾ ಸಮಸ್ಯೆಗಳನ್ನು ಚರ್ಚಿಸಿ, ತ್ವರಿತವಾಗಿ ಕಾರ್ಯಗತಗೊಳಿಸಲು ಅನುಕೂಲ ಮಾಡಿಕೊಡಲು ಸಭೆಗೆ ತಿಳಿಸಿದರು.

**ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ,**

**ನೋಡೆಲ್ ಅಧಿಕಾರಿ**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ**

ಪ್ರತಿಯನ್ನು,

1) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
2) ಕಾರ್ಯಪಾಲಕ ಅಭಿಯಂತರರು, ಯೋಜನೆ (ಪೂರ್ವ ವಲಯ) ಬಿ.ಬಿ.ಎಂ.ಪಿ
3) ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ ವಲಯ) ಬಿ.ಬಿ.ಎಂ.ಪಿ
4) ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
6) ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು.ಬಿ.ಬಿ.ಎಂ.ಪಿ
7) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
8) ತೋಟಗಾರಿಕಾ ಅಧೀಕ್ಷಕರು, (ಪೂರ್ವ ವಲಯ)
9) ಆರೋಗ್ಯ ವೈದ್ಯಾಧಿಕಾರಿಗಳು, (ಪೂರ್ವ ವಲಯ)
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
11) ಸಹಾಕಯ ಕಂದಾಯ ಅಧಿಕಾರಿ. ಮಾರುತಿ ಸೇವಾ ನಗರ ಉಪವಿಭಾಗ
12) ಕಲ್ಯಾಣಾದಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
13) ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
14) ಪೋಲಿಸ್ ಇನ್ಸ್‌ಪೆಕ್ಟರ್ ಬಾಣಸವಾಡಿ.
15) ಪೋಲಿಸ್ ಇನ್ಸ್‌ಪೆಕ್ಟರ್ (ಸಂಚಾರಿ), ಬಾಣಸವಾಡಿ.
16) ಕಛೇರಿ ಪ್ರತಿ.